ಅಸಲ ದಾವಾ ನಂ.**133/2020**
ಪಿಡಬ್ಲ್ಯೂ: **01**

ದಿನಾಂಕ: **26-09-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ**

**ಶ್ರೀ.ಎಸ್.ಎನ್.ಎಸ್. ವಕೀಲರಿಂದ**

1) ಸರ್ವೆ ನಂ.379 ರಲ್ಲಿ ಚನ್ನಬಸಪ್ಪ ಗುರುಲಿಂಗಪ್ಪ ಬಿಷ್ಟಗೊಂಡ ರವರು ಅರ್ಧ ಮಾಲೀಕರು ಇದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 1937 ರಲ್ಲಿ ತಮ್ಮ ಹಿಸ್ಸಾವನ್ನು ನಿಂಗಪ್ಪ ಹಂಗರಗಿ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.379 ರಲ್ಲಿ ಇನ್ನೂ ಅರ್ಧ ಹಿಸ್ಸಾ ಮಾನಿಂಗಪ್ಪ ಬಸಪ್ಪ ಬಿಷ್ಟಗೊಂಡ ರವರಿಗೆ ಇತ್ತು ಎಂದರೆ ಸರಿ. ಅವರು ತಮ್ಮ ಹಿಸ್ಸಾವನ್ನು ಮಲ್ಲಪ್ಪ ಮಹಾನಿಂಗಪ್ಪ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಗಿರಿಮಲ್ಲಪ್ಪ ಚನ್ನಬಸಪ್ಪ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. 1941 ರಲ್ಲಿ ನಿಂಗಪ್ಪ ಈರಪ್ಪ ತಮ್ಮ ಹಿಸ್ಸಾವನ್ನು ಗಿರಿಮಲ್ಲಪ್ಪ ನಿಂಗಪ್ಪ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಬಿಟ್ಟುಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ತನ್ನ ಅರ್ಧ ಹಿಸ್ಸಾವನ್ನು ಮಹಾಲಿಂಗಪ್ಪ ಗಿರಿಮಲ್ಲಪ್ಪ ನಿಂಗಪ್ಪ ಬಿಷ್ಟಗೊಂಡ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಚನ್ನಬಸಪ್ಪ ಮತ್ತು ಗಿರಿಮಲ್ಲಪ್ಪ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.379 ಕ್ಕೆ ಗಿರಿಮಲ್ಲಪ್ಪ ನಿಂಗಪ್ಪ

ಒಬ್ಬನೇ ಮಾಲೀಕನಾಗಿದ್ದಾನೆ ಎಂದರೆ ಸಾಕ್ಷಿಯು ಇಬ್ಬರೂ ಮಾಲೀಕರಾಗಿದ್ದಾರೆ ಎಂದು ಉತ್ತರಿಸುತ್ತಾರೆ. 1946 ರಲ್ಲಿ ಗಿರಿಮಲ್ಲಪ್ಪ ಸರ್ವೆ ನಂ.379 ಅನ್ನು ಚನ್ನಪ್ಪ ಕಲ್ಲಪ್ಪ ಚನಗೊಂಡ ರವರಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಚನ್ನಪ್ಪ 1948 ರಲ್ಲಿ ಸರ್ವೆ ನಂ.379 ಅನ್ನು ಮರಳಿ ಗಿರಿಮಲ್ಲಪ್ಪ ನಿಂಗಪ್ಪ ಬಿಷ್ಟಗೊಂಡ ರವರಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ.

2) 1948 ರಲ್ಲಿ ಗಿರಿಮಲ್ಲಪ್ಪ ನಿಂಗಪ್ಪ ಬಿಷ್ಟಗೊಂಡ ಈತನು ಸರ್ವೆ ನಂ.379 ಕ್ಕೆ ಒಬ್ಬನೇ ಮಾಲೀಕನು ಇದ್ದನು ಎಂದರೆ ಸರಿಯಲ್ಲ. ಕಾಗದ ಪತ್ರಗಳ ಪ್ರಕಾರ, ಗಿರಿಮಲ್ಲಪ್ಪ ತೀರಿಕೊಂಡ ನಂತರ ನಿಂಗವ್ವರವರ ಹೆಸರಿಗೆ ವಾರಸಾ ಆಯಿತು ಎಂದರೆ ಸರಿ. 60 ವರ್ಷಗಳ ಹಿಂದೆ ನಿಂಗವ್ವ ಚಂದ್ರಾಮಪ್ಪ ಇವರಿಗೆ ದತ್ತಕ ಪಡೆದುಕೊಂಡಳು ಎಂದರೆ ಸರಿಯಲ್ಲ. ಚಂದ್ರಾಮಪ್ಪ ಮುಂದೆ ಸರ್ವೆ ನಂ.379 ಕ್ಷೇತ್ರ 06 ಎಕರೆ 38 ಗುಂಟೆ ಖರೀದಿ ಮಾಡಿದ್ದಾನೆ ಎಂದರೆ ಸರಿ. ಚಂದ್ರಾಮಪ್ಪ ತೀರಿಕೊಂಡು 08 ವರ್ಷ ಆಗಿದೆ ಎಂದರೆ ಸರಿ. ಚಂದ್ರಾಮಪ್ಪ ತೀರಿಕೊಂಡ ನಂತರ ಆಕೆಯ ಹೆಂಡತಿಯಾದ ಬೋರವ್ವಳ ಹೆಸರು ಬಂದಿದೆ ಎಂದರೆ ಸರಿ. ಈ ಎರಡೂ ಸರ್ವೆ ನಂಬರ್ ಗಳಿಗೆ ನಿಮ್ಮ ಮುತ್ಯಾನ ಹೆಸರು ಯಾವತ್ತೂ ಹತ್ತಿಲ್ಲ ಎಂದರೆ ಸರಿ. ಆದರೆ, ಗಿರಿಮಲ್ಲಪ್ಪ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾನೆ ಎಂದು

ಉತ್ತರಿಸುತ್ತಾರೆ.

3) ನೀವು ಹಾಜರುಪಡಿಸಿದಂತಹ ಕಾಗದ ಪತ್ರದಲ್ಲಿ ನಿಮ್ಮ ತಂದೆ, ದೊಡ್ಡಪ್ಪ ಮತ್ತು ಚಿಕ್ಕಪ್ಪನ ಹೆಸರು ಎಂದೂ ಬಂದಿಲ್ಲ ಎಂದರೆ ಸರಿ. ನೀವು ಹಾಜರುಪಡಿಸಿದಂತಹ ಕಾಗದ ಪತ್ರದಲ್ಲಿ ನೀವಾಗಲಿ, ನಿಮ್ಮ ತಂದೆ ಮತ್ತು ಚಿಕ್ಕಪ್ಪ ಸಾಗುವಳಿ ಮತ್ತು ಬೀಜ ಗೊಬ್ಬರ ಖರೀದಿ ಮಾಡಿರುವ ಬಗ್ಗೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ನೀವು ಹಾಜರುಪಡಿಸಿದಂತಹ ಕಾಗದ ಪತ್ರಗಳ ಪ್ರಕಾರ, ಬ್ಯಾಂಕಿನಲ್ಲಿ ಸಾಲ ಪಡೆದಿರುವ ಬಗ್ಗೆ ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಕಾರ, ಬೋರವ್ವ ಮಾತ್ರ ಸದರಿ ಆಸ್ತಿಗೆ ಮಾಲೀಕರು ಇದ್ದು, ಆ ಕಾರಣಕ್ಕೆ ಈ ದಾವೆಯನ್ನು ಹಾಕಿದ್ದೇವೆ ಎಂದರೆ ಸರಿ. ಬೋರವ್ವಳಿಗೆ ಸಂಬಂಧಪಟ್ಟಂತಹ ಎರಡೂ ಜಮೀನಿನಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

4) ಈಗ ಬೋರವ್ವಳ ವಯಸ್ಸು 70 ರ ಮೇಲೆ ಇರುತ್ತದೆ. ಬೋರವ್ವಳಿಗೆ ಯಾವುದೇ ಮಕ್ಕಳು ಇಲ್ಲ ಎಂದರೆ ಸರಿ. ಅವರು ಒಬ್ಬನನ್ನು ದತ್ತಕ ಪಡೆದುಕೊಂಡಿದ್ದಾಳೆ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಬೋರವ್ವ ನಿಮಗೆ ಜಮೀನನ್ನು ಮಾಡುವ ಬಗ್ಗೆ ನಿಮ್ಮ ಮತ್ತು ಬೋರವ್ವಳ ನಡುವೆ ಕಾಗದ ಏನಾದರೂ

ಆಗಿದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಹಾಜರುಪಡಿಸಿದಂತಹ ಕಾಗದ ಪತ್ರದಲ್ಲಿ ಮಾಲೀಕಳು ಹೆಸರು ಮತ್ತು ಸಾಗುವಳಿದಾರರ ಹೆಸರು ಮತ್ತು ಬೋರವ್ವಳ ಹೆಸರು ಇದೆ ಎಂದರೆ ಸರಿ. ಬೋರವ್ವಳಿಗೆ 70 ವರ್ಷ ವಯಸ್ಸು ಇರುವುದರಿಂದ, ನೀವೇ ಅವರಿಗೆ ಹೆದರಿಸಿ, ಬೆದರಿಸಿ ಸಾಗುವಳಿ ಮಾಡಲು ಪ್ರಯತ್ನ ಮಾಡಿದ್ದೀರಿ ಎಂದರೆ ಸರಿಯಲ್ಲ.

5) ಬೋರವ್ವ ಬಿತ್ತಿರುವ ಬೆಳೆಗಳನ್ನು ನೀವು ಎಲ್ಲರಿಗೂ ಸೇರಿಸಿ ನಾಶಪಡಿಸಿದ್ದೀರಿ ಎಂದರೆ ಸರಿಯಲ್ಲ. ಬೋರವ್ವ ಹಿರಿಯರನ್ನು ಕರೆಸಿ, ಹೇಳಿಸಿದ್ದರೂ ಸಹ ನೀವು ಆಕೆಯನ್ನು ಹೆದರಿಸಿ ಸಾಗುವಳಿ ಮಾಡಲು ಪ್ರಯತ್ನಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಬೋರವ್ವ ದುರ್ಬಲ ಇದ್ದಾಳೆ ಎಂದು ತಿಳಿದುಕೊಂಡು ನೀವು ದುರುದ್ದೇಶದಿಂದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಖೊಟ್ಟಿ ದಾವೆಯನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆಗಲಿ, ನಿಮ್ಮ ತಂದೆಗೆ ಆಗಲಿ, ನಿಮ್ಮ ಮುತ್ತ್ಯಾನಿಗೆ ಆಗಲಿ, ಈ ದಾವಾ ಜಮೀನಿನಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನೀವು, ನಿಮ್ಮ ತಂದೆ, ನಿಮ್ಮ ದೊಡಪ್ಪ ಮತ್ತು ನಿಮ್ಮ ಚಿಕ್ಕಪ್ಪ ಯಾವ ಕಾಲಕ್ಕೂ ಈ ಜಮೀನಿನ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ದಾವೆಯಲ್ಲಿ ಬರೆದಂತಹ ಎಲ್ಲ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯವಿಚಾರಣೆ

ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಿಮಗೆ ದಾವಾದ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ, ಬೋರವ್ವಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.